ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 16-01-1980.

# *ಆಲ್‌ಮೈಟಿ ಅಥಾರಿಟಿ ರಾಜ(ಯೋಗಿ)ಸಭೆ ಹಾಗೂ ಲೋಕ(ಪ್ರಿಯ)ಸಭೆ*

(ऑलमाइटी अथॉरिटी राज (योगी) सभा व लोक (पसन्द) सभा)

ಇಂದು ಇಡೀಕಲ್ಪದಲ್ಲಿ ಸರ್ವಶ್ರೇಷ್ಠ ಬ್ರಾಹ್ಮಣರ ಅಥವಾ ರಾಜಯೋಗಿಗಳ ಸಭೆಯನ್ನು ನೋಡುತ್ತಿದ್ದೇವೆ. ಒಂದುಕಡೆಯಿದೆ ವರ್ತಮಾನದ ಅಲ್ಪಕಾಲದ ರಾಜ್ಯದ ರಾಜಸಭೆ ಹಾಗೂ ಲೋಕಸಭೆ ಇನ್ನೊಂದುಕಡೆಯಿದೆ- ಸರ್ವಶಕ್ತಿವಂತನ ಮೂಲಕ ತಯಾರಾಗಿರುವ ರಾಜಯೋಗಿಗಳ ಸಭೆ, ಲೋಕಪ್ರಿಯ ಸಭೆ, ಎರಡೂ ಸಭೆಗಳು ತನ್ನ ತನ್ನ ಕಾರ್ಯವನ್ನು ಮಾಡುತ್ತಿವೆ. ಅಲ್ಪಕಾಲದ ಲೋಕಸಭೆಯು ಅಲ್ಪಕಾಲದ ಲಾ ಅಂಡ್ ಆರ್ಡರ್ ಮಾಡುತ್ತದೆ ಮತ್ತು ಲೋಕಪ್ರಿಯ ಬ್ರಾಹ್ಮಣರ ಸಭೆಯು ಅವಿನಾಶಿ ಲಾ ಅಂಡ್ ಆಡರ್ ನ ರಾಜ್ಯವನ್ನು ತಯಾರು ಮಾಡುತ್ತಿದೆ. ಹೇಗೆ ಆ ಲೋಕಸಭೆ ಅಥವಾ ರಾಜ್ಯಸಭೆಯಲ್ಲಿ ನೇತರು ತನ್ನ-ತನ್ನ ಅಲ್ಪಬುದ್ಧಿ ಮತ್ತು ಅಲ್ಪಕಾಲದ ಭಿನ್ನ-ಭಿನ್ನ ವಿಚಾರಗಳನ್ನು ಮಾಡುತ್ತಿರುತ್ತಾರೆ, ಹಾಗೆಯೇ ಬ್ರಾಹ್ಮಣರ ರಾಜ್ಯಸಭೆ ಅಥವಾ ರಾಜಯೋಗಿಯ ಸಭೆಯ ವಿಶ್ವಕಲ್ಯಾಣದ ಭಿನ್ನ-ಭಿನ್ನ ವಿಚಾರಗಳು ಬರುತ್ತಿರುತ್ತದೆ. ಅದು ಸ್ವಾರ್ಥಕ್ಕಾಗಿ ಇದೆ ಮತ್ತು ಇದು ವಿಶ್ವಕಲ್ಯಾಣರ್ಥವಾಗಿ ಇದೆ ಆದ್ದರಿಂದ ಲೋಕಪ್ರಿಯರಾಗುತ್ತೀರಿ. ಸ್ವಾರ್ಥವಿದೆಯೆಂದರೆ ಮನಪ್ರಿಯ ಎಂದು ಹೇಳಲಾಗುತ್ತದೆ ಮತ್ತು ವಿಶ್ವಕಲ್ಯಾಣಾರ್ಥ ವಿಚಾರವಿದೆಯೆಂದರೆ ಲೋಕಪ್ರಿಯ ಹಾಗೂ ಪ್ರಭುಪ್ರಿಯರಾಗಿಬಿಡುತ್ತೀರಿ. ಯಾವುದೇ ಸಂಕಲ್ಪ ಅಥವಾ ವಿಚಾರ ಮಾಡಿದಾಗ, ಮೊದಲು ಇದನ್ನು ಪರಿಶೀಲನೆ ಮಾಡಿರಿ- ಈ ವಿಚಾರ ಅಥವಾ ಸಂಕಲ್ಪವು ಪ್ರಭುಪ್ರಿಯವಾಗಿದೆಯೇ? ಯಾರೊಂದಿಗೆ ಬಹಳಸ್ನೇಹವಿರುತ್ತದೆಯೋ ಅವರ ಬಯಕೆಯು ತನ್ನ ಬಯಕೆಯಾಗಿರುತ್ತದೆ. ತಂದೆಗೆ ಏನು ಪ್ರಿಯವಾಗುತ್ತದೆಯೋ, ಅದು ತಮಗೂ ಪ್ರಿಯ ಮತ್ತು ತಂದೆಗೆ ಏನು ಪ್ರಿಯವಾಗುತ್ತದೆಯೋ ಅದು ಸ್ವತಹವಾಗಿಯೇ ಲೋಕಪ್ರಿಯವೂ ಆಗಿಬಿಡುತ್ತದೆ. ಏಕೆಂದರೆ ಇಡೀ ವಿಶ್ವಕ್ಕೆ ಗೊತ್ತಿದ್ದರೂ ಅಥವಾ ಗೊತ್ತಿಲ್ಲದಿದ್ದರೂ, ನೋಡುತ್ತಿದ್ದರೂ ಅಥವಾ ನೋಡದಿದ್ದರೂ, ಎಲ್ಲದಕ್ಕಿಂತ ಪ್ರಿಯವಾಗಿರುವವರು ಯಾರಾಗಿದ್ದಾರೆ? ಧರ್ಮಪಿತರು ತನ್ನ ಧರ್ಮದ ಅತ್ಮರ ಪ್ರಿಯನಾಗಿದ್ದಾರೆ. ಆದರೆ ಧರ್ಮಪಿತರಿಗೂ ಒಬ್ಬ ತಂದೆ. ಪರಮಪಿತನೇ ಪ್ರಿಯನಾಗಿದ್ದಾರೆ. ಆದ್ದರಿಂದ ಎಲ್ಲರ ಮುಖದಿಂದ ಸಮಯ-ಪ್ರತಿಸಮಯದಲ್ಲಿ ಭಿನ್ನ ಭಿನ್ನ ಭಾಷೆಯಲ್ಲಿ ಒಬ್ಬ ತಂದೆಯನ್ನೇ ಕರೆಯುತ್ತಾರೆ. ಅಂದಮೇಲೆ ಯಾವ ತಂದೆಯು ಲೋಕಪ್ರಿಯರಾಗಿದ್ದರೆಯೋ ಅವರಿಗೆ ಪ್ರಿಯವಾದ ನೀವು ತಾನಾಗಿಯೇ ಲೋಕಪ್ರಿಯವಾಗಿಬಿಡುತ್ತೀರಿ. ತಮ್ಮನ್ನು ತಾವು ಕೇಳಿಕೊಳ್ಳಿರಿ ನನಗೆ ಲೋಕಪ್ರಿಯ ಸಭೆಯ ಟಿಕೆಟ್ ಸಿಕ್ಕಿದೆಯೇ? ತಂದೆಯು ಆಯ್ಕೆ ಮಾಡಿದ್ದಾರೆ. ಒಂದುವೇಳೆ ತಂದೆಯ ಮಕ್ಕಳಾಗಿದ್ದು ಮತ್ತು ತಂದೆಯಂತು ಸ್ವೀಕಾರ ಮಾಡಿದ್ದಾರೆ ಆದರೂ ತಂದೆ ಪ್ರತಿನಿತ್ಯವೂ ನಂಬರ್‌ವಾರ್ ಎಂದು ಏಕೆ ಹೇಳುತ್ತಾರೆ. ಎಲ್ಲಿ 8 ರ ಮಾಲೆಯ ಮೊದಲ ನಂಬರ್ ಮತ್ತು ಎಲ್ಲಿ 16 ಸಾವಿರದ ಮಾಲೆಯ ಅಂತಿಮ ನಂಬರ್ ಇಬ್ಬರೂ ಮಕ್ಕಳಂತು ಆಗಿದ್ದಾರೆ ಆದರೆ ಅಂತರವೆಷ್ಟಿದೆ! ಅಂತರವೇಕೆ ಆಯಿತು? ಅದರ ಮೂಲಕಾರಣವೇನು?

ಒಬ್ಬ ತಂದೆಯ ಮಕ್ಕಳಾದಾಗಲೂ ಇಷ್ಟೊಂದು ವ್ಯತ್ಯಾಸವೇಕೆ? ಕೆಲವರು - ವಿಶ್ವಕಲ್ಯಾಣ ಕಾರ್ಯವನ್ನು ಮಾಡುವವರು ಮತ್ತು ಇನ್ನು ಕೆಲವರು - ಕಾರ್ಯವನ್ನು ಮಾಡುವವರು ಮತ್ತು ಕಾರ್ಯದ ಮಹಿಮೆ ಮಾಡುವವರು. ಮೊದಲನೆಯವರು ಮಹಿಮಾಯೋಗ್ಯವಾಗುವವರು 1. ಮಾಡಬೇಕು, 2. ಮಾಡಬೇಕಾಗಿದೆ, ಆಗಬೇಕಾಗಿದೆ ಎನ್ನುತ್ತಾರೆ. ಆದ್ದರಿಂದ ಒಬ್ಬತಂದೆಯ ಮಕ್ಕಳಾಗಿಯೂ ಸಹ ಎಷ್ಟೊಂದು ವ್ಯತ್ಯಾಸವಾಗಿಬಿಡುತ್ತದೆ. "ಬೇಕು" ಎನ್ನುವುದನ್ನು "ಇದೆ" ಎನ್ನುವುದರಲ್ಲಿ ಪರಿವರ್ತಿಸಿರಿ ಯಾರು ಸದಾ ಇದೆ, ಇದೆ ಎನ್ನುತ್ತಾರೆಯೋ ಅವರು ಹಾ-ಹಾಕಾರಗಳಿಂದ ಮುಕ್ತರಾಗಿಬಿಡುತ್ತಾರೆ. ಬೇಕು ಎನ್ನುವವರು ಕೆಲವೊಮ್ಮೆ ಬಡ ಉಮ್ಮಂಗದಲ್ಲಿ ನರ್ತಿಸುತ್ತಾರೆ, ಕೆಲವೊಮ್ಮೆ ವಿಘ್ನದಲ್ಲಿ ಆಹಾಕಾರದಲ್ಲಿ ಇರುತ್ತಾರೆ ಅವರು ಲೋಕಪ್ರಿಯ ಸಭೆಯ ಸದಸ್ಯರಲ್ಲ, ಹೇಗೆ

ಅಲ್ಲಿ ಪಾರ್ಟಿಯ ಸದಸ್ಯರು ಬಹಳ ಇರುತ್ತಾರೆ ಆದರೆ ಸಭೆಯ ಸದಸ್ಯರು ಸ್ವಲ್ಪವೇ ಇರುತ್ತಾರೆ. ಇಲ್ಲಿಯೂ ಸಹ ಬ್ರಾಹ್ಮಣ ಪರಿವಾರದ ಸದಸ್ಯರಂತು ಅವಶ್ಯವಾಗಿ ಆಗಿರುತ್ತಾರೆ ಆದರೆ ಲೋಕಪ್ರಿಯ ಸಭೆ ಸದಸ್ಯ ಅರ್ಥಾತ್ ಲಾ ಅಂಡ್ ಆರ್ಡರ್ ನ ರಾಜ್ಯದ ಅಧಿಕಾರವನ್ನು ತೆಗೆದುಕೊಳ್ಳುವಂತಹ ಅಧಿಕಾರಿ ಆತ್ಮರ ಪಟ್ಟಿಯಲ್ಲಿ ಬರುವುದಿಲ್ಲ. ಅವರಾಗಿದ್ದಾರೆ ರಾಜ್ಯಸಿಂಹಾಸನದ ಅಧಿಕಾರಿ ಮತ್ತು ಇವರಾಗಿದ್ದಾರೆ- ರಾಜ್ಯದಲ್ಲಿ ಬರುವ ಅಧಿಕಾರಿಗಳು, 16 ಸಾವಿರದ ಮಾಲೆಯಲ್ಲಿ, ರಾಜ್ಯದಲ್ಲಿ ಬರುವ ಅಧಿಕಾರಿಗಳು ಆದರೆ ರಾಜ್ಯಸಿಂಹಾಸನದ ಅಧಿಕಾರಿಗಳಾಗಿರುವುದಿಲ್ಲ. ಅಂದಮೇಲೆ ಲೋಕಪ್ರಿಯ ಸಭೆಯ ಟಿಕೆಟ್ ನ್ನು ಬುಕ್ ಮಾಡಿಬಿಟ್ಟರೆ ರಾಜ್ಯಸಿಂಹಾಸನವು ಸ್ವತಹವಾಗಿಯೇ ಪ್ರಾಪ್ತಿಯಾಗುತ್ತದೆ.

ಇಂದು ಬಾಪ್‌ದಾದಾರವರು ತನ್ನ ಸರ್ವ ಮಹಾನ್ ತೀರ್ಥ ಸ್ಥಾನಗಳಿಗೆ ಪರಿಕ್ರಮಣ ಮಾಡಲು ಹೊರಟರು. ಈಗಿನ ಸೇವಾಕೇಂದ್ರವು ಭಕ್ತಿಯಲ್ಲಿ ತೀರ್ಥಸ್ಥಾನದ ರೂಪದಲ್ಲಿ ಪೂಜೆ ಮಾಡಲಾಗುತ್ತದೆ. ಅಂದಮೇಲೆ ಎಲ್ಲಾ ತೀರ್ಥಸ್ಥಾನಗಳನ್ನು ಪರಿಕ್ರಮಿಸುತ್ತಾ, ಗಂಗಾ- ಯಮುನಾ-ಸರಸ್ವತಿ-ಗೋದಾವರಿ ಎಲ್ಲರನ್ನೂ ನೋಡಿದರು, ಎಲ್ಲಾ ಜ್ಞಾನಾ ನದಿಗಳು ತಮ್ಮ-ತಮ್ಮ ಸೇವೆಯಲ್ಲಿ ನಿರತರಾಗಿದ್ದರು. ಕೆಲವೊಂದೆಡೆ ಅಲ್ಪಸ್ವಲ್ಪ ವಾರಸುಧಾರರನ್ನೂ ನೋಡಿದರು ಮತ್ತು ಕೆಲವೊಂದೆಡೆ ಕೆಲವರು ಆಗುವಂತಹ ವಾರಸುಧಾರರನ್ನೂ ನೋಡಿದರು. ಕೆಲವೊಂದೆಡೆ ರಾಯಲ್ ಫ್ಯಾಮಿಲಿಯ ಅತಿಸಮೀಪದ ರಾಜ್ಯಕಾರೋಬಾರ್‌ನ್ನು ನಡೆಸುವವರನ್ನೂ ನೋಡಿದರು. ಅವರು ರಾಜ್ಯಕ್ಕೆ ಆದೇಶವನ್ನು ಕೊಡುವವರು, ಅವರು ರಾಜ್ಯಕಾರೋಬಾರನ್ನು ನಡೆಸುವವರು, ಇದನ್ನು ಮೆಜಾರಿಟಿಯಲ್ಲಿ ನೋಡಿದರು. ಏಕೆಂದರೆ ವರ್ತಮಾನದಲ್ಲಿ ಬಾಪ್‌ದಾದಾರವರು ನಾಲ್ಕೂಕಡೆಯಲ್ಲಿರುವ ಮಕ್ಕಳ ಭಿನ್ನ ಭಿನ್ನ ಪ್ರಕಾರದ ಪರಿಶೀಲನೆ ಮತ್ತು ಫಲಿತಾಂಶವನ್ನು ನೋಡುತ್ತಿದ್ದಾರೆ. ಕೊನೆಯಲ್ಲಿ ಫಲಿತಾಂಶದ ಅನೌನ್ಸಂತು ಆಗಬೇಕಲ್ಲವೆ. ಆದ್ದರಿಂದ ವರ್ತಮಾನದಲ್ಲಿ ಎಲ್ಲರ ಪೇಪರ್ ಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ. ಇಂದು ಬಾಪ್‌ದಾದಾರವರು ಪ್ರತಿಯೊಂದು ಮಕ್ಕಳಲ್ಲಿ ವಿಶೇಷವಾಗಿ ಪವಿತ್ರತೆಯ ವಿಷಯದ ಪರೀಕ್ಷಾಪತ್ರವನ್ನು ಪರಿಶೀಲನೆ ಮಾಡುತ್ತಿದ್ದರು. ಆದ್ದರಿಂದ ವಿಶೇಷವಾಗಿ ಪರಿಕ್ರಮಣ ಹಾಕುವುದಕ್ಕೂ ಹೊರಟರು, ಅದರಲ್ಲಿ ಪ್ರತಿಯೊಂದು ಬ್ರಾಹ್ಮಣಮಗುವಿನ ಪವಿತ್ರತೆಯ ಪ್ರಕಾಶತೆಯು ಎಲ್ಲಿಯವರೆಗೆ ವಿಸ್ತಾರದಲ್ಲಿ ಹೋಗುತ್ತಿದೆ ಅರ್ಥಾತ್ ಸೇವಾಸ್ಥಾನದಲ್ಲಿ ಪ್ರತೀ ಆತ್ಮನ ಪವಿತ್ರತೆಯ ಪ್ರಕಂಪನಗಳು ಎಲ್ಲಿಯವರೆಗೆ ಬೀಳುತ್ತಿದೆ! ಪವಿತ್ರತೆಯ ಪರ್ಸೆಂಟೇಜ್ ಚಿಕ್ಕ ಬಲ್ಬನ ಸಮಾನವಾಗಿದೆಯೇ ಅಥವಾ ದೊಡ್ಡಬಲ್ಬನ ಸಮಾನವಿದೆಯೇ ಅಥವಾ ಸರ್ಚ್‌ಲೈಟ್‌ನ ಸಮಾನವಿದೆಯೇ ಅಥವಾ ಲೈಟ್ ಹೌಸ್‌ನ ಸಮಾನವಿದೆಯೇ ಎಲ್ಲಿಯವರೆಗೆ ಪವಿತ್ರತೆಯ ಶಕ್ತಿಯು ವಾಯುಮಂಡಲವನ್ನು ಪರಿವರ್ತನೆ ಮಾಡಬಹುದು- ಈ ಫಲಿತಾಂಶವನ್ನು ನೋಡುವುದಕ್ಕಾಗಿ ಸರ್ವ ತೀರ್ಥಸ್ಥಾನಗಳ ಪರಿಕ್ರಮಣ ಮಾಡಿದರು. ತೀರ್ಥಸ್ಥಾನದ ಮಹತ್ವಕ್ಕೆ ನಿಮಿತ್ತರಾಗಿರುವ ಸೇವಾಧಾರಿಗಳು ಸತ್ಯ ತೀರ್ಥಸ್ಥಾನದಲ್ಲಿದ್ದಾರೆ. ನಿಮಿತ್ತ ಸೇವಾಧಾರಿಗಳ ಪ್ರಭಾವವು ಎಷ್ಟಿರುತ್ತದೆಯೋ, ಅಷ್ಟು ನಾಲ್ಕೂಕಡೆಯ ಪ್ರಕಂಪನ ಮತ್ತು ವಾಯುಮಂಡಲವಾಗುತ್ತದೆ. 18ನೇ ಜನವರಿಯಲ್ಲಿ ಎಲ್ಲಾ ಪರೀಕ್ಷೆಗಳ ಫಲಿತಾಂಶವನ್ನು ತಿಳಿಸುತ್ತೇವೆ. ಬಾಪ್‌ದಾದಾರವರ ಇಂದಿನ ದಿನಚರಿಯು ಇದಾಗಿತ್ತು- ಪವಿತ್ರತೆಯ ಪರೀಕ್ಷಾಪತ್ರವನ್ನು ಪರಿಶೀಲನೆ ಮಾಡುವುದು. ಪ್ರತಿಯೊಂದು ಸ್ಥಾನದಲ್ಲಿಯೂ ಇದರ ಫಲಿತಾಂಶವನ್ನು ನೋಡಿದರು. ಆದಿಯಿಂದ ಈಗಿನವರೆಗೂ ಪವಿತ್ರತೆಯ ಲೆಕ್ಕಪತ್ರವು ಏನಾಗಿದೆ, ಸಂಕಲ್ಪದಿಂದ ಸ್ವಪ್ನದವರೆಗಿನ ಎಲ್ಲಾ ಪರಿಶೀಲನೆಯನ್ನು ಮಾಡಲಾಯಿತು. ಬಾಪ್‌ದಾದಾರವರು ತನ್ನ ಸಹಯೋಗಿಗಳನ್ನು ಯಾವಾಗ ಬೇಕೋ ಆಗ ಇಮರ್ಜ್ ಮಾಡಿಬಿಡುತ್ತಾರೆ. ಟ್ರಿಬ್ಯುನಲ್ (ವಿಚಾರಣಾ ಸಭೆ)ನ ಗಾಯನವಂತು ಆಗುತ್ತದೆ, ಅಂತ್ಯದಲ್ಲಾಗುತ್ತದೆ ಸಹಯೋಗಿಗಳ ಟ್ರಿಬ್ಯುನಲ್. ಈಗಂತು ಪ್ರಿಯವಾದ ಮಕ್ಕಳ ಹಾಗೂ ಸಹಯೋಗಿ ಮಕ್ಕಳ ರೂಪದಲ್ಲಿ ಇಮರ್ಜ್ ಮಾಡುತ್ತಾರೆ. ಏಕೆ ಮಾಡುತ್ತಾರೆ? ಬಾಪ್‌ದಾದಾರವರೂ ಸಹ ಚಿಕ್ಕ-ಚಿಕ್ಕ ಸಭೆಗಳನ್ನು ಮಾಡುತ್ತಾರಲ್ಲವೆ, ಹೇಗೆ ತಾವುಗಳು ಕೆಲವೊಮ್ಮೆ ಜೋನ್ ಮುಖ್ಯಸ್ಥರುಗಳ ಮೀಟಿಂಗ್ ಮಾಡುತ್ತೀರಿ, ಸೇವಾಧಾರಿಗಳ ಮೀಟಿಂಗ್ ಮಾಡುತ್ತೀರಿ, ಕೆಲವೊಮ್ಮೆ ಸರ್ವಿಸೇಬಲ್ ಮಕ್ಕಳದನ್ನು ಮಾಡುತ್ತೀರಲ್ಲವೆ. ಬಾಪ್‌ದಾದಾರವರೂ ಸಹ ಅಲ್ಲಿ ಗ್ರೂಪ್‌ನ್ನು ಕರೆಯುತ್ತಾರೆ. ನೆನಪಿದೆಯೇ- ಪ್ರಾರಂಭದಲ್ಲಿ ಸೌಭಾಗ್ಯಶಾಲಿಗಳ ಗ್ರೂಪ್‌ನ್ನು ಮಾಡಲಾಗಿತ್ತು. ಎಲ್ಲಾ ಗ್ರೂಪ್‌ನವರಿಗೆ ಬೇರೆ-ಬೇರೆಯಾಗಿ ಭೋಜನವನ್ನು

ತಿನ್ನಿಸಲಾಗಿತ್ತು. ಈಗ ಭಾಗವತದಲ್ಲಿ ಬಂದುಬಿಟ್ಟಿದ್ದಾರೆ. ಭಾಗವತವಂತು ಬಹಳ ಉದ್ದಗಲವಾಗಿದೆ. ಭಕ್ತಿಯಲ್ಲಿಯೂ ಸಹ ಗೀತೆಗಿಂತ ಭಾಗವತವನ್ನು ದೊಡ್ಡದನ್ನಾಗಿ ಮಾಡಿದ್ದಾರೆ. ಗೀತಾಜ್ಞಾನವನ್ನು ತಿಳಿಸುವುದರಲ್ಲಿ ಯಾರೇ ರುಚಿಯಿಡಲಿ ಅಥವಾ ರುಚಿಯಿಡದಿರಲಿ ಆದರೆ ಎಲ್ಲರೂ ಭಾಗವತವನ್ನು ಕೇಳುತ್ತಾರೆ. ಹೇಗೆ ಸಾಕಾರದಲ್ಲಿ ಮಕ್ಕಳಿಂದ ಸ್ಪರ್ಧೆಯನ್ನು ಮಾಡಿಸಲಾಯಿತು, ಇದೇರೀತಿ ಈಗಲೂ ಸಹ ಮಕ್ಕಳನ್ನು ವತನದಲ್ಲಿ ಇಮರ್ಜ್ ಮಾಡಿಸುತ್ತಿರುತ್ತಾರೆ. ಪರೀಕ್ಷಾಪತ್ರದ ಪರಿಶೀಲನೆಯಂತೂ ಮಕ್ಕಳಿಂದಲೇ ಮಾಡಿಸುತ್ತಾರೆ ಏಕೆಂದರೆ ತಂದೆಯು ಸದಾ ಬಾಲಕರಿಂದ ಮಾಲೀಕನ ರೂಪದಲ್ಲಿ ನೋಡುತ್ತಾರೆ. ಆದ್ದರಿಂದ ಪ್ರತಿಯೊಂದು ಕಾರ್ಯದಲ್ಲಿಯೂ ನಿಮಿತ್ತರಾಗಿರುವ ಮಕ್ಕಳನ್ನು ದೊಡ್ಡಸಹೋದರನ ಸಂಬಂಧದಿಂದ ನೋಡುತ್ತಾರೆ. ಅಂದಾಗ ಸಹೋದರ-ಸಹೋದರನ ಮಿಲನವು ಹೇಗಾಗುತ್ತದೆ! ಸಹೋದರನಪ್ರತಿ ಸಹೋದರರಿಂದ ಪರಿಶೀಲನೆ ಮಾಡಿಸುತ್ತಾರಲ್ಲವೆ ಆದ್ದರಿಂದ ಬಾಪ್‌ದಾದಾರವರು ಎಂದೂ ಒಂಟಿಯಾಗಿರುವುದಿಲ್ಲ. ಸದಾ ಮಕ್ಕಳ ಜೊತೆಯಿರುತ್ತಾರೆ. ಎಂದೂ ಸಹ ಒಂಟಿಯಾಗಿರುವುದಿಲ್ಲ. ಆದ್ದರಿಂದ ನೆನಪಾರ್ಥದಲ್ಲಿಯೂ ನೋಡಿ- ಪುರುಷಾರ್ಥಿ, ದಿಲ್‌ವಾಲಾ ಮಂದಿರದಲ್ಲಿ ಒಂಟಿಯಾಗಿದ್ದಾರೆಯೇ? ಮಕ್ಕಳ ಜೊತೆಯಿದ್ದಾರಲ್ಲವೆ ಮತ್ತು ಅಂತಿಮ ಫಲಿತಾಂಶದ ವಿಜಯಮಾಲೆ ಅದರಲ್ಲಿಯೂ ಒಂಟಿಯಾಗಿಲ್ಲ. ಕೆಲವೊಮ್ಮೆ ಕೆಲವರನ್ನು, ಕೆಲವೊಮ್ಮೆ ಕೆಲವರನ್ನು ಜೊತೆಯಲ್ಲಿಟ್ಟುಕೊಂಡಿರುತ್ತಾರೆ, ತಂದೆಯು ತಮ್ಮ ಸಂಪೂರ್ಣ ಫರಿಶ್ತಾರೂಪವನ್ನು ಇಮರ್ಜ್ ಮಾಡುತ್ತಾರೆ. ಆ ಟಚಿಂಗ್ ತಮಗೂ ಬರುತ್ತದೆ. ಅದು ಪ್ರತಿನಿತ್ಯವೂ ಬರುತ್ತದೆಯೇ ಅಥವಾ ಕೆಲವೊಮ್ಮೆ ಬರುತ್ತದೆಯೇ? ತಾವು ಸೂಕ್ಷ್ಮ ವತನವನ್ನು ಇಲ್ಲಿಗೆ ತರುತ್ತೀರಿ ಮತ್ತು ಬಾಬಾರವರು ತಮ್ಮನ್ನು ಸೂಕ್ಷ್ಮವತನದಲ್ಲಿ ಕರೆದೊಯ್ಯುತ್ತಾರೆ. ತಂದೆಯು ಕೆಲವೊಮ್ಮೆ ತಮ್ಮಬಳಿ ಬಂದುಬಿಡುತ್ತಾರೆ, ಕೆಲವೊಮ್ಮೆ ತಮ್ಮನ್ನೇ ತನ್ನಬಳಿ ಕರೆಸಿಕೊಳ್ಳುತ್ತಾರೆ. ಇಡೀ ದಿನದಲ್ಲಿ ಇದೇ ವ್ಯಾಪಾರವನ್ನು ಮಾಡುತ್ತಾರೆ. ಕೆಲವೊಮ್ಮೆ ಆಟವಾಡುತ್ತಾರೆ ಮತ್ತು ಆಡಿಸುತ್ತಾರೆ, ಕೆಲವೊಮ್ಮೆ ತಮ್ಮನ್ನು ತನ್ನಜೊತೆ ಸೇವೆಯಲ್ಲಿ ತೊಡಗಿಸುತ್ತಾರೆ, ಕೆಲವೊಮ್ಮೆ ತನ್ನಜೊತೆಯಲ್ಲಿ ಸಾಕ್ಷಾತ್ಕಾರವನ್ನು ಮಾಡಿಸುವುದಕ್ಕಾಗಿ ಕರೆದುಕೊಂಡು ಹೋಗುತ್ತಾರೆ ಮತ್ತು ಕೆಲವೊಮ್ಮೆ ಸಾಕ್ಷಾತ್ಕಾರ ಮಾಡಿಸುವುದಕ್ಕಾಗಿ ಕಳುಹಿಸುತ್ತಾರೆ. ಏಕೆಂದರೆ ಕೆಲಕೆಲವು ಭಕ್ತರು ಇಷ್ಟೂ ಹಠಮಾಡುತ್ತಾರೆ, ಅದರಿಂದ ತನ್ನ ಇಷ್ಟದೇವನಿಂದ ಸಾಕ್ಷಾತ್ಕಾರವಾಗದೇ ಸಂತುಷ್ಟರಾಗುವುದಿಲ್ಲ. ಭಲೆ ತಂದೆಯೇ ಅವರಮುಂದೆ ಪ್ರತ್ಯಕ್ಷವಾದರೂ ಅವರು ತನ್ನ ಇಷ್ಟದೇವನನ್ನೇ ಬಯಸುತ್ತಾರೆ. ಆದ್ದರಿಂದ ಭಕ್ತರಬಳಿ ಭಿನ್ನ-ಭಿನ್ನ ಇಷ್ಟದೇವ ಮತ್ತು ದೇವಿಯರನ್ನು ಕಳುಹಿಸಲೇಬೇಕಾಗುತ್ತದೆ ಮತ್ತೇನು ಮಾಡುತ್ತಾರೆ? ಕೆಲಕೆಲವೊಮ್ಮೆ ವಿಶೇಷ ಸ್ನೇಹಿ ಹಾಗೆ ಸಹಯೋಗಿ ಮಕ್ಕಳ ಕಿವಿಯಲ್ಲಿ ವಿಶೇಷಮಂತ್ರವನ್ನೂ ಕೊಡುತ್ತಾರೆ. ಅದನ್ನು ಏಕೆ ಕೊಡುತ್ತಾರೆ? ಏಕೆಂದರೆ ಕೆಲಕೆಲವು ಇಂತಹ ಕಾರ್ಯಗಳು ಬರುತ್ತದೆ, ಅದರಲ್ಲಿ ವಿಶೇಷ ಆತ್ಮರು ಅಥವಾ ಮುದ್ದಾದ ಮಕ್ಕಳು ನಿಮಿತ್ತರಾಗಿರುವ ಕಾರಣದಿಂದ ಸಾಹಸ, ಉಲ್ಲಾಸ ಮತ್ತು ತಮಗೆ ಪ್ರಾಪ್ತಿಯಾಗಿರುವ ಶಕ್ತಿಗಳಿಂದ ಕಾರ್ಯವನ್ನು ಮಾಡುವುದಕ್ಕಾಗಿ ಬಂದುಬಿಡುತ್ತಾರೆ. ಹೇಗೆ ಕೆಲವೊಂದುಕಡೆ ರಾಕೆಟ್ ಬಹಳ ಮೇಲಕ್ಕೆ ಹೋಗಬೇಕಾದಾಗ, ಬಹಳ ಶಕ್ತಿಯ ಬಲದ ಆಧಾರದಿಂದ ಮೇಲಕ್ಕೆ ಹೋಗಿಬಿಡುತ್ತದೆ, ಆನಂತರ ನಿರಾಧಾರವಾಗಿಬಿಡುತ್ತದೆ. ಹಾಗೆಯೇ ಕೆಲವೊಂದು ಬಾರಿ ಕೇವಲ ಸೆಕೆಂಡಿನ ಸೂಚನೆಯ ಅವಶ್ಯಕತೆಯಿರುವ ಕಾರ್ಯವು ಬರುತ್ತದೆ.  ಅದರ ಟಚಿಂಗ್ ಆಗುವುದು ಇದೇ ಕಿವಿಯಲ್ಲಿ ಶಕ್ತಿಯ ಮಂತ್ರವನ್ನು ಕೊಡುವುದಾಗಿದೆ. ಒಳ್ಳೆಯದು- ವರ್ಗೀಕರಣದವರು ಬಂದಿದ್ದಾರೆ, ಅಂದಾಗ ತಂದೆಯೂ ಸಹ ತನ್ನ ವತನದಲ್ಲಿ ಏನೇನಾಗುತ್ತದೆ ಎಂಬ ವರ್ಗೀಕರಣದ ಕಾರ್ಯವನ್ನು ತಿಳಿಸಿದರು. ಇದನ್ನು ಇದಕ್ಕಾಗಿಯೇ ತಿಳಿಸಿದೆವು ಏಕೆಂದರೆ ಈಗಲೂ 18ರವರೆಗೆ ತಮ್ಮ ಅಡಿಷನ್ ಪೇಪರ್‌ನ್ನು ತಯಾರು ಮಾಡಬಹುದು, ಕೆಲವೊಮ್ಮೆ ಇನ್ನೊಂದುಬಾರಿಯೂ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಾರಲ್ಲವೆ. ಅಂದಮೇಲೆ ಈಗಲೂ ಪವಿತ್ರತೆಯ ಪರೀಕ್ಷೆಯಲ್ಲಿ ಅಡಿಷನ್ ಮಾಡಬಹುದು, ಅದರಿಂದ ಅಂಕಗಳು ಜಮಾ ಆಗಿಬಿಡುತ್ತದೆ ಏಕೆಂದರೆ ಮುಖ್ಯ ಆಧಾರ ಮತ್ತು ಸತ್ಯಜ್ಞಾನದ ಪರಿಶೀಲನೆಯು ಪವಿತ್ರತೆಯಾಗಿದೆ. ಪವಿತ್ರತೆಯ ಆಧಾರದ ಮೇಲೆ ಸಹಜಯೋಗ, ಸಹಜಜ್ಞಾನ ಮತ್ತು ಸಹಜ ಧಾರಣೆ ಹಾಗೂ ಸೇವೆಯನ್ನು ಮಾಡಬಹುದು. ನಾಲ್ಕೂವಿಷಯಗಳ ಆಧಾರ ಪವಿತ್ರತೆಯಾಗಿದೆ. ಆದ್ದರಿಂದ ಮೊದಲು ಈ ಪರೀಕ್ಷಾಪತ್ರಿಕೆಯ ಪರಿಶೀಲನೆಯಾಗುತ್ತಿದೆ.

**ಈ ರೀತಿ ಪ್ರತೀ ಸಂಕಲ್ಪದಲ್ಲಿ ಪ್ರಭುಪ್ರಿಯ ಹಾಗೂ ಲೋಕಪ್ರಿಯ, ಪ್ರತಿಯೊಂದು ಕಾರ್ಯದಲ್ಲಿ ಅಧಿಕಾರಿಯಾಗಿ ಕರ್ಮೇಂದ್ರಿಯಗಳಿಂದ ಕರ್ಮವನ್ನು ಮಾಡಿಸುವಂತಹ ಅರ್ಥಾತ್ ರಾಜ್ಯಸಭೆಯ ಅಧಿಕಾರಿ, ಸದಾ ತಂದೆಯ ಜೊತೆ ಮನಸ್ಸು ಮತ್ತು ಕರ್ಮದಲ್ಲಿ ವಿಶ್ವಸೇವೆಯ ಜೊತೆಗಾರರು, ಸದಾ ಸಂಕಲ್ಪದ ಮೂಲಕ ವಾಯುಮಂಡಲವನ್ನು ಶ್ರೇಷ್ಠವನ್ನಾಗಿ ಮಾಡುವಂತಹ, ತಮ್ಮ ಮಹಾವರದಾನಿ ವೃತ್ತಿಯಿಂದ ವೈಬ್ರೇಷನ್ನ್ನು ಹರಡಿಸುವಂತಹ, ಇಂತಹ ಸಮೀಪ ಮತ್ತು ಸಹಯೋಗಿ ಮಕ್ಕಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ಆಫೀಸರ್ಸ್ ಗ್ರೂಪ್:- ಸಫಲತೆಗೆ ಆಧಾರವಾಗಿದೆ- ನಿರ್ಣಯ ಶಕ್ತಿ.**

ನಿಯಂತ್ರಣಾ ಶಕ್ತಿ. ತಮ್ಮ ಕಾರ್ಯದಲ್ಲಿ ಸದಾ ಸಫಲರಾಗಲು ಸಾಧ್ಯವಾಗಬೇಕೆಂದರೆ ನಿರ್ಣಯಶಕ್ತಿ ಮತ್ತು ನಿಯಂತ್ರಣಾ ಶಕ್ತಿಯಿಂದ ಆಗುತ್ತದೆ. ಇದು ಆಫೀಸರ್ಸ್‌ನ ವಿಶೇಷತೆಯಾಗಿದೆ. ಒಂದುವೇಳೆ ಆಫೀಸರ್ಸ್‌ನಲ್ಲಿ ಇವೆರಡು ಶಕ್ತಿಗಳಿವೆಯೆಂದರೆ, ಸದಾ ಕೆಳಗಿರುವವರನ್ನೂ ನಡೆಸುವುದರಲ್ಲಿ ಸಫಲರಾಗುತ್ತಾರೆ ಹಾಗೂ ಕಾರ್ಯದಲ್ಲಿ ಸಫಲರಾಗುತ್ತಾರೆ. ಹೇಗೆ ಆ ಸರ್ಕಾರದ ಆಫೀಸರುಗಳಿದ್ದಾರೆಯೋ, ಹಾಗೆಯೇ ಪಾಂಡವಸರ್ಕಾರದ ಈಶ್ವರನ ಕಾರ್ಯದಲ್ಲಿಯೂ, ಅನೇಕ ಆತ್ಮರುಗಳ ಕಾರ್ಯದ ಕಾರ್ಯಾಲಯದ ಆಫೀಸರುಗಳಾಗಬೇಕು. ಅದು ಅಲ್ಪಕಾಲದ ಕಾರ್ಯಾಲಯ ಮತ್ತು ಇದು ಬೇಹದ್ದಿನ ಕಾರ್ಯಾಲಯವಾಗಿದೆ. ಹೇಗೆ ಆ ಸರ್ಕಾರದಲ್ಲಿ ಭಿನ್ನ ಭಿನ್ನ ಇಲಾಖೆಗಳ ಆಫೀಸರುಗಳಿರುತ್ತಾರೆ, ಅದೇರೀತಿ ಪಾಂಡವಸರ್ಕಾರದಲ್ಲಿಯೂ ವಿಶ್ವಕಲ್ಯಾಣದ ಕಾರ್ಯದ ಆಫೀಸರುಗಳಿರಬೇಕು. ಆಫೀಸರುಗಳ ಕರ್ತವ್ಯ ವನ್ನಂತೂ ತಿಳಿಸಲಾಗಿದೆ- ನಿರ್ಣಯ ಶಕ್ತಿ ಮತ್ತು ನಿಯಂತ್ರಣಾ ಶಕ್ತಿಯಾಗಿದೆ. ಅಂದಮೇಲೆ ಯಾರಲ್ಲಿ ಇವೆರಡು ಶಕ್ತಿಗಳಿರುತ್ತವೆಯೋ, ಅವರೇ ಈ ಈಶ್ವರನ ಕಾರ್ಯದಲ್ಲಿಯೂ ಸಫಲತಾಮೂರ್ತಿಯಾಗುತ್ತಾರೆ. ಯಾವುದೇ ಆತ್ಮನು ಸಂಪರ್ಕದಲ್ಲಿ ಬಂದಾಗ, ಇವರಿಗೆ ಯಾವ ವಸ್ತುವಿನ ಅವಶ್ಯಕತೆಯಿದೆ. ಎನ್ನುವುದನ್ನು ಮೊದಲು ನಾಡಿಯ ಮೂಲಕ ಪರಿಶೀಲನೆ ಮಾಡಲು ಸಾಧ್ಯವಾಗಬೇಕು. ಮತ್ತು ಅದೇ ಬಯಕೆಯನುಸಾರವಾಗಿ ಅವರನ್ನು ತೃಪ್ತರನ್ನಾಗಿ ಮಾಡಲು ಸಾಧ್ಯವಾಗಬೇಕು. ಸೇವೆಯಲ್ಲಿ ಸ್ವಯಂನ ನಿಯಂತ್ರಣಾ ಶಕ್ತಿಯಿಂದ ಅನ್ಯರಸೇವೆಗೆ ನಿಮಿತ್ತರಾಗಿರಿ. ಯಾವಾಗ ಅನ್ಯರ ಸೇವೆಯನ್ನು ಮಾಡುತ್ತೀರೆಂದರೆ, ಸ್ವಯಂನ್ನು ನಿಯಂತ್ರಣ ಮಾಡುವ ನಿಯಂತ್ರಣಾಶಕ್ತಿಯ ಕಾರಣದಿಂದ, ಅಚಲಸ್ಥಿತಿಯ ಪ್ರಭಾವವು ಅನ್ಯರಮೇಲೆ ಬೀರುತ್ತದೆ. ಹೇಗೆ ಆ ಆಫೀಸರುಗಳ ಕರ್ತವ್ಯವಿದೆಯೋ, ಹಾಗೆಯೇ ಇಲ್ಲಿಯೂ ಈ ಕರ್ತವ್ಯವಿರಬೇಕು. ಅಲ್ಲಿ ಕಿರಿಯರಿಂದ ಹಿರಿಯರು, ಹಿರಿಯರಿಂದ ಇನ್ನೂ ಹಿರಿಯರಾಗಲು ಬಯಸುತ್ತಾರೆ. ಒಂದುವೇಳೆ ಸರ್ಕಾರವು ಖುಷಿಯಾಯಿತೆಂದರೆ ಗವರ್ನರನನ್ನಾಗಿ ಮಾಡಿಬಿಡುತ್ತದೆ. ಆದರೆ ಇಲ್ಲಿ ವಿಶ್ವಕಲ್ಯಾಣದ ಸೇವೆಯಲ್ಲಿ ಸೇವಾಧಾರಿಯಾಗುವುದರಿಂದ ವಿಶ್ವದ ರಾಜರಾಗಿಬಿಡುತ್ತೀರಿ. ಅಂದಮೇಲೆ ವಿಶೇಷವಾಗಿ ತಮ್ಮಲ್ಲಿ ಸದಾ ಇವೆರಡು ಶಕ್ತಿಗಳಿರಬೇಕು, ಅದರಿಂದ ಸದಾ ಸಫಲತೆಯಿದೆ.

ಪಾಂಡವಸರ್ಕಾರದಲ್ಲಿಯೂ ಇಂತಹ ಒಳ್ಳೆಯ ಆಫೀಸರು ಗಳಿದ್ದಾರಲ್ಲವೆ? ವಿಶ್ವಕಲ್ಯಾಣದ ಕಛೇರಿಯನ್ನು ಇಷ್ಟು ಚೆನ್ನಾಗಿ ನಡೆಸುತ್ತಿದ್ದೀರಲ್ಲವೆ? ಆಫೀಸರುಗಳಿಗೆ ಬಹಳಒಳ್ಳೆಯ ಸೇವೆಯ ಅವಕಾಶವಿದೆ ಏಕೆಂದರೆ ಅನೇಕ ಆತ್ಮರು ಸಂಪರ್ಕದಲ್ಲಿ ಬರುತ್ತಿರುತ್ತಾರೆ. ಸಂಪರ್ಕದಲ್ಲಿ ಬರುವಂತಹ ಆತ್ಮರನ್ನು ಈಶ್ವರೀಯ ಸಂಪರ್ಕದಲ್ಲಿ ತರುವುದರಲ್ಲಿಯೂ ಅವಕಾಶವಾಯಿತಲ್ಲವೆ. ಅಂದ ಮೇಲೆ ಪಾಂಡವಸರ್ಕಾರದ ಸಂಪರ್ಕದಲ್ಲಿ ಎಷ್ಟುಮಂದಿಯನ್ನು ತರುತ್ತೀರಿ? ಸಂಪರ್ಕದಲ್ಲಿ ತರುವುದರಿಂದ, ಒಂದುಬಾರಿ ಶಾಂತಿಯ ಅನುಭವ ವಾಯಿತೆಂದರೆ ಮತ್ತೆ-ತಮ್ಮ ತಮ್ಮ ಗುಣಗಾಯನ ಮಾಡುತ್ತಾರೆ. ಈಗ ಪ್ರಜೆಗಳನ್ನು ವೃದ್ಧಿ ಮಾಡುವ ಕಛೇರಿಯನ್ನು ತೆರೆಯಬೇಕು. ಹೇಗೆ ಆ ಕಛೇರಿಯನ್ನು ಸಂಭಾಲನೆ ಮಾಡುತ್ತೀರಿ, ಹಾಗೆಯೇ ಈ ಕಛೇರಿಯನ್ನೂ ಸಂಭಾಲನೆ ಮಾಡಬೇಕು. ತಮ್ಮ ಅನುಭವದಲ್ಲಿಯೂ ವಿಶೇಷವಾದ ಶಕ್ತಿಯಿದೆ, ಆ ಅನುಭವವನ್ನು ಕೇಳುತ್ತಾ ಅನೇಕರಿಗೆ ಬಹಳ ಅನುಭವ ಆಗುತ್ತದೆ. ವರ್ತಮಾನದಲ್ಲಿ ಕೇಳುವುದು ಮತ್ತು ಹೇಳುವುದಿದೆ. ಆದರೆ ಅನುಭವವಿಲ್ಲ. ಅನುಭವದ ಇಚ್ಛುಕರಾಗಿದ್ದಾರೆ. ತಾವೆಷ್ಟು

ಅನುಭವಿ ಆಗುತ್ತೀರಿ, ಅಷ್ಟೂ ಅನುಭವ ಮಾಡಿಸಬಹುದು. ಎಲ್ಲಾ ಆಫೀಸರುಗಳು ಸಹಜಯೋಗಿಗಳಲ್ಲವೆ? ಅಥವಾ ಕೆಲವೊಮ್ಮೆ ಸಹಜಯೋಗಿ, ಕೆಲವೊಮ್ಮೆ ಪರಿಶ್ರಮದ ಯೋಗಿಗಳಾಗಿದ್ದೀರಾ! ಯಾರು ಸದಾ ಸಹಜಯೋಗಿ ಆಗಿರುತ್ತಾರೆಯೋ, ಅವರೇ ನಿರಂತರದ ಯೋಗಿಗಳಾಗುವರು. ಅಂದಾಗ ಇಂತಹ ಸಹಜಯೋಗಿಯಾಗಿದ್ದೀರಲ್ಲವೇ? ಲೌಕಿಕ ಸೇವೆಯು ಸಂಪರ್ಕವನ್ನು ವೃದ್ಧಿ ಮಾಡುವ ಸೇವೆಯಾಗಿದೆ.

ಅವ್ಯಕ್ತ ಮುರಳಿ 16-01-1980

***ಸರ್ವಶಕ್ತಿವಂತನ ರಾಜ (ಯೋಗಿ)ಸಭೆ ಹಾಗೂ ಲೋಕ(ಪ್ರಿಯ)ಸಭೆ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ವಿಶ್ವ ಕಲ್ಯಾಣದ ಯೋಚನೆಯಿಂದ ಲೋಕ ಪ್ರಿಯವಾಗಿ ಮತ್ತು ಪ್ರಭು ಪ್ರಿಯವಾಗಿ ಇದ್ದೇನೆ.

2. ನಾನು ಲೋಕಪ್ರಿಯ ಸಭೆಯ ಟಿಕೆಟ್ ಅನ್ನು ತೆಗೆದುಕೊಂಡು ರಾಜ್ಯಸಿಂಹಾಸನವನ್ನು ಸ್ವತಹವಾಗಿ ಪಡೆದಿದ್ದೇನೆ.

3. ನಾನು 'ಬೇಕು' ಎನ್ನುವುದನ್ನು 'ಇದೆ' ಎನ್ನುವುದರಲ್ಲಿ ಪರಿವರ್ತಿಸಿಕೊಂಡಿರುವ ಲೋಕಪ್ರಿಯ ಸಭೆಯ ಸದಸ್ಯನು.

4. ನನ್ನ ಪವಿತ್ರತೆಯ ಶಕ್ತಿಯು ಲೈಟ್ ಹೌಸ್ ನ ಹಾಗೆ ವಾಯುಮಂಡಲವನ್ನು ಪರಿವರ್ತನೆ ಮಾಡುತ್ತಿದ್ದೇನೆ.

5. ನಾನು ಸಂಪೂರ್ಣ ಪವಿತ್ರತೆಯನ್ನು ಧಾರಣೆ ಮಾಡಿ ಸಹಜಜ್ಞಾನ, ಸಹಜಯೋಗ, ಸಹಜ ಧಾರಣೆ ಮತ್ತು ಸೇವೆಯನ್ನು ಮಾಡಿದ್ದೇನೆ.